ಸಾಕ್ಷಿಯನ್ನು ದಿನಾಂಕಃ 19/06/2025 ರಂದು ಕರೆಯಿಸಿ ಸತ್ಯ ಪ್ರತಿಜ್ಞೆಯ ಮೇಲೆ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲುಃ- ಅರ್ಜಿದಾರರ ಪರ ವಕೀಲರಿಂದಃ**

ನನ್ನ ಊರು ಲಕ್ಕುಂಡಿ. ಲಕ್ಕುಂಡಿಯ ಬಸವರಾಜ ಹುತ್ತಣ್ಣರವರ ಪರಿಚಯ ಇದೆ. ನಾನು ಚಾಲಕ ಎಂದು ಟಿ ಸಿ ಆಯ್ ಟ್ರಾನ್ಸಪೋರ್ಟ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದೆ. ಸದರಿ ಟಿ ಸಿ ಆಯ್ ದೊಡ್ಡ ಟ್ರಾನ್ಸಪೋರ್ಟ ಕಂಪನಿ ಎಂದರೆ ಸರಿ. ಸದರಿ ಕಂಪನಿಯ ಕನಿಷ್ಟ ಅಂದರೂ ನೂರು ಲಾರಿಗಳು ಇವೆ ಎಂದರೆ ಸರಿ. ಸದರಿ ಕಂಪನಿಯ ಮಾಲೀಕರು ಹಿದಾಯಿತ. ಅವರ ಹೆಸರಿನಲ್ಲಿ ಒಂದೇ ವಾಹನ ಇದೆ. ನಾನು ಹಿದಾಯಿತ ರವರ ಲಾರಿ ತೆಗೆದುಕೊಂಡು ಹೋಗಿದ್ದೆ ಅದರ ನಂಃ ಕೆ ಎ 63-3759. 4 ನೇ ತಾರೀಖಿಗೆ ಹುಬ್ಬಳ್ಳಿ ಬಿಟ್ಟು 6 ನೇ ತಾರೀಖಿಗೆ ಪ್ಯಾಕ್ಟರಿನಲ್ಲಿ ಇದ್ದೆ. ಹುಬ್ಬಳ್ಳಿಯಿಂದ ಬಳ್ಳಾರಿ 6 ತಾಸಿನ ದಾರಿ ಎಂದರೆ ಸರಿ. ಸದರಿ ದಿನದಂದು ನಾನು ಚಾಲನೆ ಮಾಡುತ್ತಿದ್ದ ವಾಹನದಲ್ಲಿ ನಾನು ಒಬ್ಬನೇ ಇದ್ದೆ. ಸದರಿ ಲಾರಿಗೆ ಕ್ಲೀನರ್ ಇರಲಿಲ್ಲ. ಬಸವರಾಜ ಮುತ್ತಣ್ಣವರ ತೀರಿಕೊಂಡಿದ್ದರೆ ಎಂದರೆ ನನಗೆ ಗೊತ್ತಿಲ್ಲ. ನಿಮ್ಮ ಪ್ರಮಾಣ ಪತ್ರದಲ್ಲಿ ಬೆಳ್ಳಿಗ್ಗೆ ಪೊಲೀಸರು ಬಂದು ಈ ಗಾಡಿ ಮಾಲೀಕರು ಯಾರು ಎಂದು ವಿಚಾರಣೆ ಮಾಡಿದ್ದಾರೆ ಎಂದು ಹೇಳಿದ್ದೀರಿ ಎಂದರೆ ಸಾಕ್ಷಿ ನನಗೆ ಯಾವುದೇ ಪೊಲೀಸರು ವಿಚಾರಣೆ ಮಾಡಿಲ್ಲ ಎಂದು ಹೇಳುತ್ತಾರೆ. ಸದರಿ ವಾಹನ ಅನಲೋಡ ಮಾಡಿ ವಾಪಸ್ಸ ಹುಬ್ಬಳ್ಳಿಗೆ ತೆಗೆದುಕೊಂಡು ಹೋಗಿರುತ್ತೇನೆ. ನೀವು ಹೇಳುವಂತೆ ಸದರಿ ಲಾರಿಗೆ ಚಾಲಕ ಇರಲಿಲ್ಲ, ಸದರಿ ಲಾರಿಗೆ ಬಸವರಾಜ ಮುತ್ತಣ್ಣರವರು ಚಾಲಕರಾಗಿದ್ದರು ಎಂದರೆ ಸರಿಯಲ್ಲ. ದಿಃ06.06.2019 ಕ್ಕೆ ಬಳ್ಳಾರಿ ಪೊಲೀಸರು ಲಾರಿ ಅಮಾನತ್ತು ಮಾಡಿಕೊಂಡು ಹೋಗಿದ್ದರು ಎಂದರೆ ಸರಿ. ಪೊಲೀಸರ ಮುಂದೆ ನಿಮ್ಮ ಲಾರಿ ಮಾಲಕ ಆ ದಿನ ಲಾರಿಯನ್ನು ಬಸಪ್ಪ ಮುತ್ತಣ್ಣವರ ಅವರಿಗೆ ಗಾಡಿ ಕೊಟ್ಟು ಕಳುಹಿಸಿದ್ದೆ ಎಂದು ಸ್ಟೇಟಮೆಂಟ್ ನೀಡಿದ್ದಾರೆ ಎಂದರೆ ನಾನೇ ಚಾಲಕ ಇದ್ದೆ ಎಂದು ಹೇಳುತ್ತಾರೆ. ಆ ದಿನ ನಾನೇ ಲಾರಿ ಚಾಲಕ ಇದ್ದೆ ಎಂದು ಪೊಲೀಸರ ಮುಂದೆ ಹೇಳಿಕೆ ನೀಡಿದ್ದೀರಾ ಎಂದರೆ ನನಗೆ ಪೊಲೀಸರು ಕರೆದಿಲ್ಲ ಹೇಳಿಕೆ ತೆಗೆದುಕೊಂಡಿಲ್ಲ ಎಂದು ಹೇಳುತ್ತಾರೆ. ಘಟನೆ ಆದ ದಿನ ನಾನು ಸ್ಥಳದಲ್ಲಿ ಇರಲಿಲ್ಲ, ನಿಮಗೆ ಈ ಘಟನೆಯ ಬಗ್ಗೆ ಯಾವುದೇ ವಿಷಯ ಗೊತ್ತಿಲ್ಲ

ಆದರೂ ಹಿದಾಯತ ರವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

ಮುಂದಿನ ಪಾಟೀ ಸವಾಲು ಇಲ್ಲ ಎಂದು ಹೇಳುತ್ತಾರೆ.

(ಎದುರುದಾರ ನಂ.2 ರ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ಹೇಳುತ್ತಾರೆ)

**ನ್ಯಾಯಾಲಯದ ಪ್ರಶ್ನೆ:** 6 ನೇ ತಾರೀಖು ಲಾರಿ ಜಪ್ತ ಮಾಡಿದಾಗ ನಾನು ಲಾರಿ ಅಲ್ಲಿಯೇ ಬಿಟ್ಟು ಊರಿಗೆ ಬಂದಿದ್ದೆ ಎಂದು ಹೇಳುತ್ತಾರೆ. ಸಾಕ್ಷಿ ಮುಂದುವರೆದು 500 ಗಾಡಿಗೆ ಅನಲೋಡ ಮಾಡುವುದಿದ್ದು ಆದ್ದರಿಂದ ನಾನು ಗಾಡಿ ಅಲ್ಲಿಯೇ ಬಿಟ್ಟು ಬಂದಿದ್ದೆ. ನಾನು ಲಾರಿಯನ್ನು ಮೈನ್ಸ ಪ್ಯಾಕ್ಟರಿಯಲ್ಲಿ ಬಿಟ್ಟಿರುತ್ತೇನೆ. ಗಾಡಿ ಜಪ್ತ ಮಾಡುವಾಗ ನಾನು ಇರಲಿಲ್ಲ ಆ ಗಾಡಿಯ ಮಾಲಕ ಹಿದಾಯತ ಇದ್ದರು ಎಂದು ಹೇಳುತ್ತಾರೆ. ನಾನು ಸದರಿ ವಾಹನವನ್ನು ಅನಲೋಡ ಮಾಡಿಕೊಂಡು ಹುಬ್ಬಳ್ಳಿಗೆ ವಾಪಸ್ಸ ಬಂದಿರಲಿಲ್ಲ, ಗಾಡಿ ಹುಬ್ಬಳ್ಳಿಗೆ ಬಂದ ಮೇಲೆ ನಾನು ಮತ್ತೆ ಕೆಲಸಕ್ಕೆ ಹೋಗಿದ್ದೇನೆ ಎಂದು ಹೇಳುತ್ತಾರೆ. ಬಸಪ್ಪರವರು ಏನು ಕೆಲಸ ಮಾಡುತ್ತಿದ್ದರು ಎಂದು ಕೇಳಲಾಗಿ ಸಾಕ್ಷಿ ಉಸುಗು ತುಂಬುತ್ತಿದ್ದರು, ಗೌಂಡಿ ಕೆಲಸ ಮಾಡುತ್ತಿದ್ದರು ಒಟ್ಟಿನಲ್ಲಿ ಎಲ್ಲಾ ಕೆಲಸ ಮಾಡುತ್ತಿದ್ದರು. ಬಸಪ್ಪರವರು ಹೇಗೆ ತೀರಿಕೊಂಡು ಎಂದರೆ ನನಗೆ ಗೊತ್ತಿಲ್ಲ. ಬಸಪ್ಪರವರು ತೀರಿಕೊಂಡಿದ್ದಾರೆ.

**ಮರುವಿಚಾರಣೆ ಇಲ್ಲ .**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ.

(ಶ್ರೀಮತಿ ಪಿ. ಆರ್ ಪಾಟೀಲ)
19.06.2025
**ಅಧಿಕ ಹಿರಿಯ ದಿವಾಣಿ ನ್ಯಾಯಾಧೀಶರು, ಗದಗ**